★ ಮಹಿಳಾಪ್ರಧಾನ ಚಿತ್ರಗಳ ಧಾರೆಯೊಂದು ಕನ್ನಡ ಚಿತ್ರರಂಗದಲ್ಲಿ ಕಾಣಿಸುತ್ತಿದೆ. ಇದಕ್ಕೆ ಕಾರಣಗಳು ಏನಿರಬಹುದು?

ಇದನ್ನು ಎರಡು ರೀತಿಯಲ್ಲಿ ನೋಡಬಹುದು. ಹೊಸರೀತಿಯ ಸಿನಿಮಾಗಳನ್ನು ಬಯಸುತ್ತಿರುವ ಪ್ರೇಕ್ಷಕರು ಹಾಗೂ ಇಂಥ ಪ್ರಯತ್ನಗಳಲ್ಲಿ ಧೈರ್ಯದಿಂದ ತೊಡಗಿಕೊಳ್ಳುತ್ತಿರುವ ನಿರ್ಮಾಪಕರು ಮಹಿಳಾಪ್ರಧಾನ ಸಿನಿಮಾಗಳ ಹಿಂದೆ ಇದ್ದಾರೆ.

ಜನರು ಸಿನಿಮಾಗಳನ್ನು ನೋಡುವ ವಿಧಾನ ಈಗ ಬದಲಾಗಿದೆ. ಸಿನಿಮಾ ಕುರಿತ ಅಪೇಕ್ಷೆಗಳೂ ಹೆಚ್ಚಾಗಿವೆ. ಹೆಚ್ಚು ಸ್ಪೆಸಿಫಿಕ್ ಆದ ಸಂಗತಿಗಳನ್ನು ಪ್ರೇಕ್ಷಕರು ಸಿನಿಮಾದಿಂದ ಬಯಸುತ್ತಿದ್ದಾರೆ. 'ಸಿನಿಮಾ ಎನ್ನುವುದು ಫ್ಯಾಂಟಸಿ ಎಲಿಮೆಂಟ್ ಅಷ್ಟೇ' ಎನ್ನುವ ಭಾವನೆ ಈಗಿಲ್ಲ. ನೋಡುಗರ ತಮ್ಮ ಜೀವನವನ್ನು ತೆರೆಯ ಮೇಲೆ ನೋಡಲು ಹಂಬಲಿಸುತ್ತಾರೆ. ಸಹಜತೆಗೆ ಹತ್ತಿರವಾದ ಕಥೆಗಳನ್ನು ನಿರೀಕ್ಷಿಸುತ್ತಾರೆ. ಅಮ್ಮ, ತಂಗಿ, ಸ್ನೇಹಿತೆ – ಹೀಗೆ ನಮ್ಮ ಒಡನಾಟಕ್ಕೆ ದಕ್ಕುವ ವ್ಯಕ್ತಿತ್ವಗಳನ್ನೇ ತೆರೆಯ ಮೇಲೂ ಕಾಣಲು ಬಯಸುತ್ತಾರೆ. ಈ ನಿರೀಕ್ಷೆಗಳ ಹಿನ್ನೆಲೆಯಲ್ಲಿ ಹೆಣ್ಣುಮಕ್ಕಳಿಗೆ ಸಂಬಂಧಿಸಿದ ಕಥೆಗಳು ಮುನ್ನೆಲೆಗೆ ಬರುತ್ತಿವೆ.

ಪ್ರೇಕ್ಷಕರ ನಿರೀಕ್ಷೆ ಹಾಗೂ ಬೇಡಿಕೆಗಳಿಗೆ ಉದ್ಯಮ ಕೂಡ ಸಕಾರಾತ್ಮಕವಾಗಿ ಸ್ಪಂದಿಸುತ್ತಿದೆ. ಕಮರ್ಷಿಯಲ್ ಸಿನಿಮಾಗಳನ್ನು ಮಾಡಲೇಬೇಕು, ಅದು ಉದ್ಯಮದ ಉಳಿವಿಗೆ ಅಗತ್ಯ. ಆದರೆ, ಕಮರ್ಷಿಯಲ್ ನೆಲೆಗಟ್ಟಿನಲ್ಲೂ ಸಹಜತೆಗೆ ಹತ್ತಿರವಾದ ಹಾಗೂ ನಮ್ಮ ಬದುಕಿಗೆ ಸಮೀಪವಾದ ಕಥೆಗಳನ್ನು ದೃಶ್ಯಮಾಧ್ಯಮಕ್ಕೆ ತರಬಹುದಾಗಿದೆ. ಈ ನಿಟ್ಟಿನಲ್ಲಿ ಬರಹಗಾರರು, ನಿರ್ದೇಶಕರ ಸ್ಪಂದನ ಅದ್ಭುತವಾಗಿದೆ. ಹೊಸರೀತಿಯ ಸಬ್ಜೆಕ್ಟ್‌ಗಳಿಗೆ ಬಂಡವಾಳ ಹೂಡಲು ನಿರ್ಮಾಪಕರು ಕೂಡ ಧೈರ್ಯ ಮಾಡ್ತಿದ್ದಾರೆ. ಈ ನಿಟ್ಟಿನಲ್ಲಿ 'ಶುದ್ಧಿ' ಮತ್ತು 'ಉರ್ವಿ' ಅತ್ಯುತ್ತಮ ಉದಾಹರಣೆಗಳು.

★ ಚಿತ್ರೋದ್ಯಮದಲ್ಲಿ ಹೆಣ್ಣುಮಕ್ಕಳು ಹಿಂದೆಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇದು ಸಾಧ್ಯವಾದುದು ಹೇಗೆ?

ಇಂಡಸ್ಟ್ರಿಯಲ್ಲಿ ತುಂಬಾ ಕಡಿಮೆ ಹೆಣ್ಣುಮಕ್ಕಳಿದ್ದ ದಿನಗಳಿದ್ದವು. ಅದಕ್ಕೆ ಕಾರಣಗಳು ಇದ್ದವು. ಚಿತ್ರೋದ್ಯಮದ ಬಗ್ಗೆ ಭಯ ಇತ್ತು. 'ಸಿನಿಮಾದಲ್ಲಿ ಹಾಗಂತೆ ಹೀಗಂತೆ' ಎನ್ನುವ ನಕಾರಾತ್ಮಕ ಚಿಂತನೆಗಳು ಹೆಚ್ಚಾಗಿದ್ದವು. ಈಗ ಚಿತ್ರೋದ್ಯಮದ ಬಗೆಗಿನ ದೃಷ್ಟಿಕೋನ ಬದಲಾಗಿದೆ. ಉದ್ಯಮದ ಬಗೆಗಿನ ಆತಂಕ ದೂರವಾಗಿದೆ. ವಿಭಿನ್ನ ಹಿನ್ನೆಲೆಗಳ ತರುಣಿಯರು, ಅದರಲ್ಲೂ ವಿದ್ಯಾವಂತೆಯರು ಚಿತ್ರರಂಗದಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಆ ಕಾರಣದಿಂದಲೇ ಚಿತ್ರರಂಗದಲ್ಲೀಗ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಇದರಿಂದಾಗಿ ಉದ್ಯಮ ಒಂದು ಆರೋಗ್ಯಕರವಾದ ಆಯಾಮ ಪಡೆದುಕೊಂಡಿದೆ. ಹೆಚ್ಚು ಜನ ಇದ್ದಾಗ ಕಲೆ ಬೆಳೆಯುತ್ತದೆ. ಹೆಚ್ಚು ಪ್ರತಿಭೆಗಳು ಇರುವುದನ್ನು ನೋಡುವುದೇ ಒಂದು ಸಂತಸದ ಸಂಗತಿ.

★ ನಟನೆ ಎನ್ನುವುದು ನಿಮ್ಮ ಪಾಲಿಗೆ ಏನು?

ಸಿನಿಮಾದಲ್ಲಿ ನಟಿಸುವುದು ನನ್ನ ಪಾಲಿಗೆ ಒಂದು ಪ್ಯಾಷನ್. ನಾನು ಹಾಗೂ ನನ್ನಂಥ ಅನೇಕರು ದುಡ್ಡಿಗಾಗಿ ಅಥವಾ ಕೀರ್ತಿಗಾಗಿ ನಟಿಸುತ್ತಿಲ್ಲ. ನಟನೆ ಎಂದರೆ ನಮಗಿಷ್ಟ. ಇದು ಪ್ರೀತಿಯಿಂದ ಮಾಡುತ್ತಿರುವ ಕೆಲಸ.

★ ನಿಮಗೆ ಸಿಕ್ಕ ಅವಕಾಶಗಳ ಬಗ್ಗೆ ಏನನ್ನಿಸುತ್ತದೆ? ಖುಷಿ ಇದೆಯೇ?

ನಾನು ಚಿತ್ರರಂಗಕ್ಕೆ ಬಂದು ಮೂರೂವರೆ ವರ್ಷವಾಯಿತು. ನಟನೆಯ ಈ ಪಯಣ ಇಷ್ಟು ದೂರಕ್ಕೆ ನನ್ನನ್ನು ಕರೆದೊಯ್ಯಬಹುದು ಎನ್ನುವ ನಿರೀಕ್ಷೆ ಇರಲಿಲ್ಲ. ನಟಿಸಿದ ಪ್ರತಿಯೊಂದು ಸಿನಿಮಾ ಕೂಡ ನನಗೆ ಕಲಿಕೆಯ ರೂಪದಲ್ಲಿ ಪರಿಣಮಿಸಿದೆ. ದೊರೆತ ಪಾತ್ರಗಳು, ಕೆಲಸ ಮಾಡಿದ ಚಿತ್ರತಂಡಗಳು, ಒಳ್ಳೆಯ ನಿರ್ದೇಶಕರು – ಎಲ್ಲದರ ಕುರಿತು ನನಗೆ ಖುಷಿಯಿದೆ.

ನಟಿಯರೇ ನಮ್ಮಲ್ಲಿಲ್ಲ' ಎಂದು ಅಳಲು ತೋಡಿಕೊಂಡಿದ್ದರು. ಹಾಗಾದರೆ, ಕನ್ನಡದಲ್ಲಿ ನಟಿಯರಿಲ್ಲವೇ? ಅಥವಾ, ಹೊಸ ಹುಡುಗಿಯರು ಚಿತ್ರರಂಗ ಪ್ರವೇಶಿಸುತ್ತಿರುವುದು ಸುಳ್ಳೇ?

'ಪ್ರತಿಭಾವಂತ ನಟಿಯರು ಈಗ ಹೆಚ್ಚು ಮಂದಿ ಇದ್ದಾರೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಆದರೆ, ಈ ಮೊದಲೂ ಒಳ್ಳೆಯ ನಟಿಯರಿದ್ದರು. ಅವರನ್ನು ಗುರ್ತಿಸುವ ಕೆಲಸವಾಗಿರಲಿಲ್ಲ ಅಷ್ಟೇ. ಅವರಿಗೆ ಹೆಚ್ಚು ಅವಕಾಶಗಳೂ ಇರಲಿಲ್ಲ' ಎನ್ನುವುದು ವಿಶ್ವನಾಥ್‌ರ ಅನಿಸಿಕೆ. ನಟನೆಯ ಮಾನದಂಡವಾಗಿ ಹಳೆಯ ಕಾಲದ ನಟಿಯರನ್ನು ಉದಾಹರಿಸುವ ಬಗ್ಗೆಯೂ ಅವರಿಗೆ ಆಕ್ಷೇಪವಿದೆ. 'ನಾಯಕಿಯರ ಶ್ರೇಷ್ಠತೆಯ ಬಗ್ಗೆ ಮಾತನಾಡುವ ನಾವು ಬದಲಾಗಿರುವ ಕಾಲಘಟ್ಟವನ್ನೂ ಗಮನಿಸಬೇಕು. ಪುಟ್ಟಣ್ಣ ಕಣಗಾಲರ ಕಾಲದ ಕಲ್ಪನಾ, ಜಯಂತಿ, ಆರತಿ ಅವರಂಥ ಅಭಿನೇತ್ರಿಯರ ಬಗ್ಗೆ ಮಾತನಾಡುವಾಗ, ಎಲ್ಲವನ್ನೂ ವೈಭವೀಕರಿಸಿ ಹೇಳುವ ಅಂದಿನ ಶೈಲಿಯನ್ನು ನಾವು ಮರೆಯಬಾರದು. ಪುಟ್ಟಣ್ಣನವರದು ಹೆಚ್ಚು ರಿಯಲಿಸ್ಟಿಕ್ ಸಿನಿಮಾಗಳಲ್ಲ. ಆ ಕಾಲ ಈಗ ಹೋಗಿಬಿಟ್ಟಿದೆ' ಎನ್ನುತ್ತಾರೆ.

'ಒಲವೇ ಮಂದಾರ', 'ಬ್ಯೂಟಿಫುಲ್ ಮನಸುಗಳು' ರೀತಿಯ ನಾಯಕಿ ಪ್ರಧಾನ ಸಿನಿಮಾಗಳನ್ನು ರೂಪಿಸಿರುವ ಜಯತೀರ್ಥ



ಶ್ವೇತಾ ಶ್ರೀವಾಸ್ತವ